ಆಕಾಶವಾಣಿ 12.07.2024

ಪ್ರದೇಶ ಸಮಾಚಾರ

ಓದಿದವರು: ವಿವೇಕಾದಿತ್ಯ ಕನಿಯಾಲ

<><><>

ಮುಖ್ಯಾಂಶಗಳು:

- ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ; ತಮಿಳುನಾಡಿಗೆ ಇಂದಿನಿಂದ, 20 ದಿನಗಳ ವರೆಗೆ ನಿತ್ಯ 1 ಟಿ.ಎಂ.ಸಿ. ನೀರು ಹರಿಸಲು ಆದೇಶ.
- ನೀರಾವರಿ ಪಂಪ್ ಸೆಟ್‌ಗಳ ವಿದ್ಯುತ್ ಮೀಟರ್‌ಗೆ, ರೈತರ ಆಧಾರ್ ಕಾರ್ಡ್ ಜೋಡಣೆ, ಕೇವಲ ದಾಖಲಾತಿಗೆ ಮಾತ್ರ – ಕೆ.ಜೆ. ಜಾರ್ಜ್, ಸ್ಪಷ್ಟನೆ.
- ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ; ಸಾವಿರದ 8 ನೂರಾ 14 ಕೋಟಿ 31 ಲಕ್ಷ ರೂಪಾಯಿ ಪರಿಹಾರ ಪಾವತಿ – ಚಲುವರಾಯಸ್ವಾಮಿ, ಮಾಹಿತಿ.
- ವಿಶ್ವ ಆರೋಗ್ಯ ಸಂಸ್ಥೆ ಒಡಂಬಡಿಕೆ; ಗರ್ಭ ನಿರೋಧಕ ಅಳವಡಿಕೆ ಯೋಜನೆ, ನಾಲ್ಕು ಜಿಲ್ಲೆಗಳಲ್ಲಿ ಯಶಸ್ವಿ – ದಿನೇಶ್ ಗುಂಡೂರಾವ್, ಹೇಳಿಕೆ.

<><><>

ಈಗ ವಾರ್ತೆಗಳ ವಿವರ

<><><>

ಹರ್ಷ

ಪ್ರದೇಶ ಸಮಾಚಾರ
12.07.2024
ಕಾವೇರಿ/ನೀರು

ರಾಜ್ಯಾದ್ಯಂತ ಮುಂಗಾರಿನಲ್ಲಿ ಸಮೃದ್ಧ ಮಳೆಯಾಗಿರುವುದರಿಂದ, ಬತ್ತಿ ಹೋಗಿದ್ದ ಜಲಾಶಯಗಳಿಗೆ ಈಗ ಜೀವ ಕಳೆ ಬಂದಿದೆ. ಕೆ.ಆರ್.ಎಸ್. – ಕೃಷ್ಣರಾಜ ಸಾಗರ ಜಲಾಶಯದ ಒಡಲು ತುಂಬುತ್ತಿದೆ.

ಹೊಸ ದಿಲ್ಲಿಯಲ್ಲಿ ಗುರುವಾರ ನಡೆದ ಸಭೆಯಲ್ಲಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ, ತಮಿಳುನಾಡಿಗೆ ಕಾವೇರಿ ನೀರು ಹರಿಸುವಂತೆ ಆದೇಶ ಹೊರಡಿಸಿದೆ.

ಇಂದಿನಿಂದ, ಈ ತಿಂಗಳ 31ರ ವರೆಗೆ ನಿತ್ಯ ತಮಿಳುನಾಡಿಗೆ 1 ಟಿ.ಎಂ.ಸಿ. ಕಾವೇರಿ ನದಿ ನೀರು ಹರಿಸಲು ಆದೇಶಿಸಿದೆ.

ಹರ್ಷ/ಉಮೇಶ/ನ್ಯೂಸ್ ಆನ್ ಏರ್/ಬೆಂ.ಆ.6.40

ಪ್ರದೇಶ ಸಮಾಚಾರ
**12.07.2024**
ಜಾರ್ಜ್/ವಿದ್ಯುತ್

ನೀರಾವರಿ ಪಂಪ್ ಸೆಟ್‌ಗಳ ವಿದ್ಯುತ್ ಮೀಟರ್‌ಗೆ, ರೈತರ ಆಧಾರ್ ಕಾರ್ಡ್ ಜೋಡಣೆ ಕೇವಲ ದಾಖಲಾತಿಗೆ ಮಾತ್ರ ಎಂದು ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

ಬಳ್ಳಾರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸಚಿವರು, ಪರ್ಯಾಯ ವ್ಯವಸ್ಥೆ ಕಲ್ಪಿಸುವ ವರೆಗೆ, ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿರುವ ರೈತರ, 10 ಅಶ್ವ ಶಕ್ತಿಯ ಪಂಪ್ ಸೆಟ್‌ಗಳಿಗೆ, ವಿದ್ಯುತ್ ಕಡಿತ ಮಾಡುವುದಿಲ್ಲ ಎಂದು ಭರವಸೆ ನೀಡಿದರು.

ಆರ್.ಆರ್. ನಂಬರ್ ಗಳಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡಿದರೆ, ಎ ಷ್ಟು ಪಂಪ್ ಸೆಟ್ ಗಳಿವೆ ಮತ್ತು ಅವುಗಳಿಗೆ ಎ ಷ್ಟು ವಿದ್ಯುತ್ ಬೇಕು ಎಂಬ ಸ್ಪ ಷ್ಟತೆ ಸಿಗುತ್ತದೆ. ಅದಕ್ಕೆ ತಕ್ಕಂತೆ ಸಮರ್ಪಕ ವಿದ್ಯುತ್ ಪೂರೈಸಲು ಅನುಕೂಲವಾಗುತ್ತದೆ ಎಂದರು.

ನಂತರ ಸಚಿವ ಜಾರ್ಜ್, ಬಳ್ಳಾರಿ ತಾಲೂಕಿನ ಕುಡಿತಿನಿ ಬಳಿಯ, ಬಿ.ಟಿ.ಪಿ.ಎಸ್. ಶಾಖೋತ್ಪನ್ನ ಕೇಂದ್ರಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಹರ್ಷ/ಉಮೇಶ/ಟಿಟಿಸಿ ಬಳ್ಳಾರಿ

ಪ್ರದೇಶ ಸಮಾಚಾರ
**12.07.2024**
ಚಲುವರಾಯ/ಕೃಷಿ

ರಾಜ್ಯದಲ್ಲಿ ಈ ಬಾರಿ ಮುಂಗಾರು ಮಳೆ ವಾಡಿಕೆಯಂತೆ, ಉತ್ತಮವಾಗಿ ಸುರಿದಿದ್ದು, ಬಿತ್ತನೆ ಬೀಜ, ರಸ ಗೊಬ್ಬರ ಹಾಗೂ ಕೀಟನಾಶಕಗಳನ್ನು ರೈತರಿಗೆ ಸಕಾಲಿಕವಾಗಿ ವಿತರಿಸಲಾಗಿದೆ ಎಂದು, ಕೃಷಿ ಖಾತೆ ಸಚಿವ ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಹಾಸನದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವರೆಗೆ ಒಟ್ಟು 50 ಲಕ್ಷದ 91 ಸಾವಿರ ಹೆಕ್ಟರ್ ಕೃಷಿ ಭೂಮಿಯಲ್ಲಿ, ಬಿತ್ತನೆ ಪೂರ್ಣಗೊಂಡಿದೆ. 3 ಲಕ್ಷದ 17 ಸಾವಿರದ 814 ಕ್ವಿಂಟಾಲ್ ಬಿತ್ತನೆ ಬೀಜ ವಿತರಿಸಲಾಗಿದೆ. 78 ಸಾವಿರದ 34 ಕ್ವಿಂಟಾಲ್ ಬಿತ್ತನೆ ಬೀಜವನ್ನು, ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಲಾಗಿದೆ ಎಂದರು.

ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಅಡಿ, 16 ಲಕ್ಷದ 18 ಸಾವಿರ ಫಲಾನುಭವಿಗಳಿಗೆ, ಸಾವಿರದ 8 ನೂರಾ 14 ಕೋಟಿ 31 ಲಕ್ಷ ರೂಪಾಯಿಗಳ ಬೆಳೆ ವಿಮೆ ಪರಿಹಾರ ವಿತರಿಸಲಾಗಿದೆ ಎಂದು ಸಚಿವ ಚಲುವರಾಯಸ್ವಾಮಿ ನುಡಿದರು.

ಹರ್ಷ/ಉಮೇಶ/ಟಿಟಿಸಿ ಹಾಸನ

ಪ್ರದೇಶ ಸಮಾಚಾರ
**12.07.2024**
ಚಲುವರಾಯಸ್ವಾಮಿ/ಪರಿಹಾರ

ಕೇಂದ್ರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿ ಅನ್ವಯ, 3 ಸಾವಿರದ ನಾಲ್ಕನೂರ 54 ಕೋಟಿ ರೂಪಾಯಿ ಬರ ಪರಿಹಾರ ವಿತರಿಸಲಾಗಿದೆ ಎಂದು, ಕೃಷಿ ಖಾತೆ ಸಚಿವ ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಹಾಸನದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ರಾಜ್ಯಾದ್ಯಂತ ಮಣ್ಣಿನ ಪರೀಕ್ಷೆ ಹೆಚ್ಚಿಸಿ, ಉತ್ತಮ ಮಾಹಿತಿ ಒದಗಿಸಲು, ಕೃಷಿ ಇಲಾಖೆ ಯೋಜಿಸಿದೆ. ಮಣ್ಣಿನ ಐದು ಲಕ್ಷ ಮಾದರಿಗಳನ್ನು ಸಗ್ರಹಿಸಿ, ಪರೀಕ್ಷೆಗೆ ಒಳಪಡಿಸಲು ಗುರಿ ಹೊಂದಲಾಗಿದೆ. ಜೊತೆಗೆ ಮಣ್ಣು ಪರೀಕ್ಷೆಗೆ ಮೊಬೈಲ್ ಆಪ್ ಅಭಿವೃದ್ಧಿಪಡಿಸಿ, ಮಾಹಿತಿ ನೀಡಲು ಕೃಷಿ ಇಲಾಖೆ ಮುಂದಾಗಿದೆ, ಎಂದರು.

ಹರ್ಷ/ಉಮೇಶ/ಟಿಟಿಸಿ ಹಾಸನ

ಪ್ರದೇಶ ಸಮಾಚಾರ
**12.07.2024**
ಮಳೆ/ನೀರು

ಮಹಾರಾಷ್ಟ್ರದ ಕೃಷ್ಣ ನದಿ ಪಾತ್ರದಲ್ಲಿ, ಭಾರೀ ಮಳೆಯಾಗುತ್ತಿರುವ ಕಾರಣ, ವಿಜಯಪುರ ಜಿಲ್ಲೆ, ನಿಡಗುಂದಿ ತಾಲೂಕು, ಆಲಮಟ್ಟಿಯ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿ ಜಲಾಶಯಕ್ಕೆ, ಒಳ ಹರಿವು ಗಣನೀಯವಾಗಿ ಹೆಚ್ಚಿದೆ.

ಮಹಾರಾಷ್ಟ್ರದ ಕೊಯ್ನಾ ಅಣೆಕಟ್ಟೆ ಸೇರಿದಂತೆ, ವಿವಿಧ ಅಣೆಕಟ್ಟೆಗಳಿಂದ 40 ಸಾವಿರ ಕ್ಯುಸೆಕ್‌ನಷ್ಟು ನೀರು ಹರಿದು ಬಂದಿದೆ. ಆಲಮಟ್ಟಿ ಜಲಾಶಯದಿಂದ, ಮೂರುವರೆ ಸಾವಿರ ಕ್ಯುಸೆಕ್ ನೀರನ್ನು, ಗುರುವಾರ ಹೊರಬಿಡಲಾಗಿದೆ.

ಅಂದಾಜು ಏಳೂವರೆ ಸಾವಿರ ಕ್ಯುಸೆಕ್ ವರೆಗೂ ನೀರನ್ನು ಹೊರ ಬಿಡುವ ಸಾಧ್ಯತೆ ಹಿನ್ನೆಲೆ, ಆಲಮಟ್ಟಿ ಜಲಾಶಯದ ಕೆಳ ಭಾಗ, ಕೃಷ್ಣ ನದಿ ಪಾತ್ರದ ಹಳ್ಳಿಗಳ ಜನ ಮುಂಜಾಗ್ರತೆ ವಹಿಸುವಂತೆ, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ ಅಧಿಕಾರಿಗಳು ಆಕಾಶವಾಣಿ ಮೂಲಕ, ಮನವಿ ಮಾಡಿದ್ದಾರೆ.

ಪಂಪ್‌ಸೆಟ್‌ಗಳನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸುವಂತೆ, ನದಿ ಪಾತ್ರಕ್ಕೆ ಜನ ಮತ್ತು ಜಾನುವಾರು ಇಳಿಯದಂತೆ, ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

<><><>

ನಾರಾಯಣಪೂರ ಮತ್ತು ತುಂಗಭದ್ರಾ ಜಲಾಶಯದಿಂದ ಕೃಷ್ಣ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿ ಬಿಡಲಾಗುತ್ತಿದ್ದು, ಪ್ರವಾಹ ಉಂಟಾಗುವ ಸಾಧ್ಯತೆ ಇದೆ ಎಂದು ರಾಯಚೂರು ಜಿಲ್ಲೆ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ ನಿತೀಶ್.ಕೆ ಮುನ್ನೆಚ್ಚರಿಕೆ ನೀಡಿದ್ದಾರೆ.

ನದಿ ಪಾತ್ರದ ಜನ ಜಾಗ್ರತೆ ವಹಿಸುವಂತೆ, ಪ್ರವಾಹ ಪೀಡಿತ ಗ್ರಾಮದ ಜನರನ್ನು, ತಾತ್ಕಾಲಿಕವಾಗಿ ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲು ಸಹ ಕ್ರಮ ವಹಿಸಲಾಗುತ್ತಿದೆ ಎಂದು, ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ.

ಹರ್ಷ/ಉಮೇಶ/ಟಿಟಿಸಿ ವಿಜಯಪುರ/ರಾಯಚೂರು

ಪ್ರದೇಶ ಸಮಾಚಾರ
**12.07.2024**
ತುಂಗಾ/ಪಾನಂ?!

ಶಿವಮೊಗ್ಗ ಜಿಲ್ಲೆಯ ಜೀವನಾಡಿ, ತುಂಗಾ ನದಿ ಮಲಿನವಾಗುವುದನ್ನು ನಿಯಂತ್ರಿಸಲು, ನದಿಯ ನಿರಂತರ ಉಸ್ತುವಾರಿ ಹಾಗೂ ನಿರ್ವಹಣೆಗಾಗಿ ಸಮಿತಿ ರಚಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವುದಾಗಿ, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ತಿಳಿಸಿದ್ದಾರೆ.

ನಟ ಅನಿರುದ್ಧ ಜತ್ಕರ ಅವರು, ತುಂಗಾ ನದಿಗೆ ನಿತ್ಯ ತ್ಯಾಜ್ಯ, ಚರಂಡಿ ನೀರು ಸೇರಿ ಮಲಿನವಾಗುತ್ತಿರುವುದನ್ನು ತಡೆಗಟ್ಟಲು, ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ ಹಿನ್ನೆಲೆ, ಜಿಲ್ಲಾಧಿಕಾರಿ ತುರ್ತಾಗಿ ಸಮಾಲೋಚನಾ ಸಭೆ ನಡೆಸಿದರು.

ತುಂಗಾ ನದಿಗೆ ಶಿವಮೊಗ್ಗ ನಗರದಿಂದ ಮಾತ್ರವಲ್ಲದೇ, ತೀರ್ಥಹಳ್ಳಿ ಪಟ್ಟಣ ಹಾಗೂ ಗ್ರಾಮಾಂತರ ವಸತಿ ಪ್ರದೇಶಗಳಿಂದಲೂ ತ್ಯಾಜ್ಯ ಸೇರುತ್ತಿದೆ.

ಹರ್ಷ/ಉಮೇಶ/ಕೆ.ವಾ.ಇ.ಶಿ

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪ್ರದೇಶ ಸಮಾಚಾರ
**12.07.2024**
ದಿನೇಶ್/ಜನಸಂಖ್ಯಾ ದಿನ

ವಿಶ್ವ ಆರೋಗ್ಯ ಸಂಸ್ಥೆಯ ಒಡಂಬಡಿಕೆ ಹಿನ್ನೆಲೆ, ಗರ್ಭ ನಿರೋಧಕ ಅಳವಡಿಕೆ ಯೋಜನೆ ಅನುಷ್ಠಾನಕ್ಕೆ, ಪ್ರಾಯೋಗಿಕವಾಗಿ ರಾಜ್ಯದ **4** ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಯೋಜನೆ ಯಶಸ್ವಿಯಾದ ಪ್ರಯುಕ್ತ, **6** ಜಿಲ್ಲೆಗಳಿಗೆ ಯೋಜನೆಯನ್ನು ವಿಸ್ತರಿಸಲಾಗುವುದು ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ದಾವಣಗೆರೆಯಲ್ಲಿ ಆಯೋಜಿಸಿದ್ದ, ರಾಜ್ಯ ಮಟ್ಟದ ವಿಶ್ವ ಜನಸಂಖ್ಯಾ ದಿನಾಚರಣೆ ಉದ್ಘಾಟಿಸಿ, ಅವರು ಮಾತನಾಡಿದರು.

ಜನಸಂಖ್ಯೆ ನಿಯಂತ್ರಣಕ್ಕಾಗಿ, ಗರ್ಭ ನಿರೋಧಕ ಅಳವಡಿಕೆಯಲ್ಲಿ, ಕರ್ನಾಟಕ ರಾಜ್ಯ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಕುಟುಂಬ ನಿಯಂತ್ರಣದ ಅಂಗವಾಗಿ, ಇದೇ ಮೊದಲ ಬಾರಿಗೆ ಪರಿಚಯಿಸಲಾದ, 'ನಯೀ ಪಹೇಲಿ ಕಿಟ್', ಗರ್ಭಧಾರಣೆ ತಡೆಗಟ್ಟಲು, ಸೆಲ್ಫ್ ಕೇರ್ ಕಿಟ್‌ಗಳನ್ನು, ನೂತನ ವಧು, ವರರಿಗೆ ವಿತರಿಸಲಾಗುತ್ತಿದೆ ಎಂದು ಸಚಿವರು ಮಾಹಿತಿ ನೀಡಿದರು.

<><><>

'ಅಭಿವೃದ್ಧಿ ಹೊಂದಿದ ಭಾರತದ ನೂತನ ಗುರುತಿಗಾಗಿ, ಕುಟುಂಬ ಯೋಜನೆ ಅಳವಡಿಕೆ, ಪ್ರತಿ ದಂಪತಿಯ ಹೆಮ್ಮೆ' ಎಂಬುದು, ಈ ವ ೯ದ ಜನಸಂಖ್ಯಾ ದಿನಾಚರಣೆಯ ಘೋ 'ವಾಕ್ಯವಾಗಿದೆ.

ಹರ್ಷ/ಉಮೇಶ/ಟಿಸಿ ದಾವಣಗೆರೆ

ಪ್ರದೇಶ ಸಮಾಚಾರ
12.07.2024
ಶರಣಪ್ರಕಾಶ್/ಜಯದೇವ

ಕಲಬುರಗಿಯಲ್ಲಿ ಸುಮಾರು, 183 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ, ಜಯದೇವ ಹೃದ್ರೋಗ ಚಿಕಿತ್ಸೆ ಮತ್ತು ಸಂಶೋಧನಾ ಆಸ್ಪತ್ರೆಯನ್ನು, ಮುಂದಿನ ಮೂರು ತಿಂಗಳಲ್ಲಿ ಲೋಕಾರ್ಪಣೆ ಮಾಡಲಾಗುವುದು ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಡಾಕ್ಟರ್ ಶರಣಪ್ರಕಾಶ ಪಾಟೀಲ, ತಿಳಿಸಿದ್ದಾರೆ.

ನಿರ್ಮಾಣ ಹಂತದಲ್ಲಿರುವ, ಜಯದೇವ ಹೃದ್ರೋಗ ಆಸ್ಪತ್ರೆ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ ಸಚಿವರು, ಹೆಚ್ಚುವರಿಯಾಗಿ 60 ಕೋಟಿ ರೂಪಾಯಿ ಅನುದಾನಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ, ಎಂದರು

ಹರ್ಷ/ಉಮೇಶ/ಕೆ.ವಾ.ಇ.ಕ

ಪ್ರದೇಶ ಸಮಾಚಾರ
12.07.2024
ಏಮ್ಸ್/ಹೋರಾಟ

ರಾಯಚೂರಿಗೆ ಏಮ್ಸ್ ಆಸ್ಪತ್ರೆ ಮಂಜೂರು ಮಾಡಲು, ಕೇಂದ್ರ ಸರ್ಕಾರ ಪ್ರಸಕ್ತ ಸಾಲಿನ ಮುಂಗಡಪತ್ರದಲ್ಲಿ ಪ್ರಾವಧಾನ ಕಲ್ಪಿಸಿ, ಅಧಿಕೃತವಾಗಿ ಘೋಷಿಸಬೇಕು ಎಂದು, ಏಮ್ಸ್ ಹೋರಾಟ ಸಮಿತಿ ಮುಖಂಡ, ರಾಯಚೂರಿನ ಅಶೋಕ್‌ಕುಮಾರ್ ಜೈನ ಆಗ್ರಹಿಸಿದ್ದಾರೆ.

ಬಳ್ಳಾರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಬರುವ 16ನೇ ತಾರೀಖು ಮಂಗಳವಾರ, ಏಮ್ಸ್ ಆಸ್ಪತ್ರೆ ಮಂಜೂರು ಮಾಡುವಂತೆ ಆಗ್ರಹಿಸಿ, ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಲ್ಲಿ, ಹೋರಾಟ ನಡೆಯಲಿದೆ ಎಂದರು.

ಹೋರಾಟ ಸಮಿತಿಯ ಇನ್ನೋರ್ವ ಮುಖಂಡ ಸಿರಿಗೆರೆ ಪೊನ್ನುರಾಜ್ ಮಾತನಾಡಿ, ಗಣಿಗಾರಿಕೆ ಬಾಧಿತ ಪ್ರದೇಶದ ಜನರ ಆರೋಗ್ಯ ಕಾಪಾಡಲು, ಸಕಾಲಿಕ ಚಿಕಿತ್ಸೆ ಒದಗಿಸಲು, ಜಯದೇವ ಹೃದ್ರೋಗ ಚಿಕಿತ್ಸಾ ಆಸ್ಪತ್ರೆ ಮತ್ತು ಕಿದ್ವಾಯಿ ಗಂಥಿ ಚಿಕಿತ್ಸಾಲಯದ ಘಟಕಗಳನ್ನು ಬಳ್ಳಾರಿಯಲ್ಲಿ ಆರಂಭಿಸಲು, ಒತ್ತಾಯಿಸಲಾಗುವುದು ಎಂದರು.

ಹರ್ಷ/ಉಮೇಶ/ಟಿಸಿ ಬಳ್ಳಾರಿ

ಪ್ರದೇಶ ಸಮಾಚಾರ
12.07.2024
ಮಧು/ಶಿಕ್ಷ..ಣ

ರಾಜ್ಯದಲ್ಲಿ ಹೊಸದಾಗಿ ಐನೂರು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆದು, ಹಂತಹಂತವಾಗಿ ಉನ್ನತೀಕರಿಸಲಾಗುವುದು; ಅಲ್ಲಿ 10 ಲಕ್ಷ ಮಕ್ಕಳು ದ್ವಿಭಾಷಾ ಮಾಧ್ಯಮದಲ್ಲಿ ಓದಲು ಅವಕಾಶ ಕಲ್ಪಿಸಲಾಗುವುದು ಎಂದು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ, ಶಿವಮೊಗ್ಗದ ಅಂಬೇಡ್ಕರ್ ಭವನದಲ್ಲಿ, ಸನ್ಮಾನಿಸಿ ಲ್ಯಾಪ್ ಟಾಪ್ ನೀಡಿ, ಅವರು ಮಾತನಾಡಿದರು.

ರಾಜ್ಯದಲ್ಲಿ 45 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿ ಶಿಕ್ಷಣ ನೀಡಲಾಗುತ್ತಿದೆ. ಈ ವ ´ೕ 10 ಸಾವಿರ ಸರ್ಕಾರಿ ಶಿಕ್ಷಕರ ನೇಮಕಾತಿ ಮಾಡಲಾಗುವುದು. ಅನುದಾನಿತ ಶಾಲೆಗಳಿಗೂ, 2020 ರಿಂದ ಮಂಜೂರಾತಿ ನೀಡಲು ಸಿದ್ಧತೆ ನಡೆಸಲಾಗಿದೆ ಎಂದರು.

ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ ನೀಗಿಸಲು, 10 ನೇ ತರಗತಿ ವರೆಗೆ ಮೊಟ್ಟೆ ಮತ್ತು ರಾಗಿ ಮಾಲ್ಟ್ ನೀಡಲಾಗುತ್ತಿದೆ, ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

<><><>

ಈ ಮಧ್ಯೆ, ಕಲಬುರಗಿ ಜಿಲ್ಲೆ, ಅಫಜಲಪೂರ ಪಟ್ಟಣದ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ, ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ, ಕಟ್ಟಡದ ಮೇಲ್ಛಾವಣಿಯ ಪದರು ಕುಸಿದು, ಗಾಯಗೊಂಡಿದ್ದ ನಾಲ್ವರು ವಿದ್ಯಾರ್ಥಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಅವರು ಚೇತರಿಸಿಕೊಂಡಿದ್ದಾರೆ ಎಂದು, ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಪ್ರಭು ದೊರೆ ತಿಳಿಸಿದ್ದಾರೆ.

ಹರ್ಷ/ಉಮೇಶ/ಕೆ.ವಾ.ಇ.ಶಿ./ಪಿಟಿಸಿ ಶಿವಮೊಗ್ಗ/ಕೆ.ವಾ.ಇ.ಕ.ಪ್ರ.

ಪ್ರದೇಶ ಸಮಾಚಾರ
12.07.2024
ಆಲೂರು/ಜಯಂತಿ

ಕರ್ನಾಟಕ ಏಕೀಕರಣದ ರೂವಾರಿ, ಕರ್ನಾಟಕ ಕುಲಪುರೋಹಿತ ಎಂದೇ ಖ್ಯಾತರಾದ, ಆಲೂರು ವೆಂಕಟರಾವ ಅವರ, 144ನೇ ಜಯಂತಿ ಇಂದು.

'ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ' ಧ್ಯೇಯದೊಂದಿಗೆ ಆಚರಿಸಲಾಗುತ್ತಿರುವ, ಸುವರ್ಣ ಕರ್ನಾಟಕ ಸಂಭ್ರಮದ ಹಿನ್ನೆಲೆ, ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಇಂದು ಬೆಳಗ್ಗೆ 10.30ಕ್ಕೆ, ಆಲೂರು ವೆಂಕಟರಾಯರ ಜನ್ಮ ದಿನಾಚರಣೆ ನಿಮಿತ್ತ, ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರಾದ, ಜಯಶ್ರೀ ಶಿಂತ್ರಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹಿರಿಯ ಪತ್ರಕರ್ತ ಮನೋಜಗೌಡ ಪಾಟೀಲ ಅವರು, 'ಪತ್ರಿಕಾ ರಂಗಕ್ಕೆ ಆಲೂರು ವೆಂಕಟರಾವ ಅವರ ಕೊಡುಗೆ ಮತ್ತು ಪತ್ರಿಕಾ ರಂಗದಲ್ಲಿ ಭಾಷಾ ಬಳಕೆ' ಕುರಿತು ವಿಶೇಷ ಉಪನ್ಯಾಸ ನೀಡುವರು.

ಹರ್ಷ/ಉಮೇಶ/ಡಾ.ದೀಪಕ್ ಆಲೂರ

ಪ್ರದೇಶ ಸಮಾಚಾರ
12.07.2024
ಮಳೆ/ಮುನ್ಸೂಚನೆ

ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ, ಮುಂದಿನ 3 ದಿನ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ, ಮುನ್ಸೂಚನೆ ನೀಡಿದೆ.

ಉತ್ತರಕನ್ನಡ, ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲೂ ಗಾಳಿ ಸಮೇತ ಮಳೆಯಾಗುವ ನಿರೀಕ್ಷೆಯಿದೆ.

ಹರ್ಷ/ಉಮೇಶ/ಎಂಡಿ

ಪ್ರದೇಶ ಸಮಾಚಾರ

12.07.2024

ಅಪರ್ಣಾ ನಿಧನ

ನಟಿ, ಖ್ಯಾತ ನಿರೂಪಕಿ ಅಪರ್ಣಾ ಬೆಂಗಳೂರಿನಲ್ಲಿ ಗುರುವಾರ ನಿಧನರಾದರು. ಅವರಿಗೆ 57 ವರ್ಷ ವಯಸ್ಸಾಗಿತ್ತು.

ಕನ್ನಡ ಭಾಷೆಯಲ್ಲಿ ಅತ್ಯಂತ ಸೊಗಸಾಗಿ ನಿರೂಪಣೆ ಮಾಡುತ್ತಾ, ನಾಡಿನ ಮನೆಮಾತಾಗಿದ್ದ, ಬಹುಮುಖ ಪ್ರತಿಭೆಯೊಂದು ಬಹುಬೇಗ ಅಗಲಿರುವುದು ದುಃಖದ ಸಂಗತಿ, ಮೃತ ಅಪರ್ಣಾ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ಸಿಗಲೆಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಂಬನಿ ಮಿಡಿದಿದ್ದಾರೆ.

ಪ್ರದೇಶ ಸಮಾಚಾರ

12.07.2024

ಕ್ರೀಡೆ

ಅತಿಥೇಯ ಬಸವನಗುಡಿ ಈಜು ಕೇಂದ್ರವು ಗುರುವಾರ ಮುಕ್ತಾಯವಾದ ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಒಟ್ಟು 1683 ಅಂಕಗಳೊಂದಿಗೆ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಡಾಲ್ಫಿನ್ ಅಕ್ವಾಟಿಕ್ಸ್ (1023 ಅಂಕ) ರನ್ನರ್ಸ್ ಅಪ್ ಸ್ಥಾನ ಪಡೆಯಿತು.

ಈಗ ಸಂಕ್ಷಿಪ್ತ ಸುದ್ದಿಗಳು:

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗಾಗಿ ನಡೆದ, ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ–ನೀಟ್ ರದ್ದತಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು, ಸುಪ್ರೀಂ ಕೋರ್ಟ್ ಇದೇ 18ಕ್ಕೆ ಮುಂದೂಡಿದೆ.

ಲೋಕಾಯುಕ್ತ ಅಧಿಕಾರಿಗಳು, 11 ಅಧಿಕಾರಿಗಳ ಮೇಲೆ 56 ಸ್ಥಳಗಳಲ್ಲಿ ದಾಳಿ ನಡೆಸಿದೆ ಎಂದು ಸುದ್ದಿ ಸಂಸ್ಥೆ ವರದಿ ಮಾಡಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ, ದಿಲ್ಲಿಯ ನೀತಿ ಆಯೋಗದ ಕಚೇರಿಯಲ್ಲಿ ದೇಶದ ಪ್ರಮುಖ ಆರ್ಥಿಕ ತಜ್ಞರೊಂದಿಗೆ ಮಾತುಕತೆ ನಡೆಸಿದರು.

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಅವಿರೋಧವಾಗಿ ಆಯ್ಕೆಯಾದ, ಬಸನಗೌಡ ಬಾದರ್ಲಿ ಅವರು, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರಿಂದ, ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಮಾನವ ಹಕ್ಕುಗಳ ಉಲ್ಲಂಘನೆಯ ದೂರುಗಳು ದಾಖಲಾಗುವಲ್ಲಿ, ಮಾಧ್ಯಮದವರ ಪಾತ್ರ ಮಹತ್ವದ್ದು ಎಂದು, ಮಾನವ ಹಕ್ಕುಗಳ ಆಯೋಗದ ರಾಜ್ಯಾಧ್ಯಕ್ಷ ಟಿ.ಶ್ಯಾಮ್ ಭಟ್, ವಿಜಯನಗರದಲ್ಲಿ ಹೇಳಿದ್ದಾರೆ.

ಪ್ರಸಕ್ತ ಸಾಲಿನಲ್ಲಿ, ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ನಿಗದಿಪಡಿಸಿದ್ದ ಅವಧಿಯನ್ನು, ಸೋಮವಾರ, 15ನೇ ತಾರೀಖಿನ ವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ, ಆದೇಶಿಸಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಕೈವಾರದ, ಶ್ರೀ ಯೋಗಿ ನಾರೇಯಣ ಯತೀಂದ್ರರ ಮಠದಲ್ಲಿ, ಗುರುಪೂರ್ಣಿಮೆ ಅಂಗವಾಗಿ, ಇದೇ 19 ರಿಂದ 21ರ ವರೆಗೆ, ಗುರು ಪೂಜಾ ಸಂಗೀತೋತ್ಸವ ನಡೆಯಲಿದೆ. ಚೆನ್ನೈನ ಪದ್ಮಶ್ರೀ ಪುರಸ್ಕೃತ ಎ. ಕನ್ಯಾಕುಮಾರಿ ಅವರ ಪಿಟೀಲು ವಾದನ ಕಛೇರಿ ಆಯೋಜಿತವಾಗಿದೆ.

ಉಡುಪಿ ಜಿಲ್ಲೆ ಬೈಂದೂರು ತಾಲೂಕು, ಆಡಳಿತ ಸೌಧದಲ್ಲಿ, ಶಾಸಕ ಗುರುರಾಜ್ ಗಂಟಿಹೊಳೆ ನಡೆಸಿದ, ತಾಲೂಕು ಮಟ್ಟದ ಜನಸ್ಪಂದನ ಸಭೆಯಲ್ಲಿ, 147 ಅಹವಾಲುಗಳು ಸಾರ್ವಜನಿಕರಿಂದ ಸಲ್ಲಿಕೆಯಾಗಿವೆ.

ಹರ್ಷ/ಹೊಂಗಲ್/ಕೆ.ವಾ.ಇ. ಜಿಲ್ಲಾವಾರು/ಜಿಲ್ಲಾವಾರು ಪಿಟಿಸಿಗಳು/ಎಚ್.ಆರ್.ಸುಧೀಂದ್ರ/ರಾಜಶ್ರೀ

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ; ತಮಿಳುನಾಡಿಗೆ ಇಂದಿನಿಂದ, 20 ದಿನಗಳ ವರೆಗೆ ನಿತ್ಯ 1 ಟಿ.ಎಂ.ಸಿ. ನೀರು ಹರಿಸಲು ಆದೇಶ.
- ನೀರಾವರಿ ಪಂಪ್ ಸೆಟ್‌ಗಳ ವಿದ್ಯುತ್ ಮೀಟರ್‌ಗೆ, ರೈತರ ಆಧಾರ್ ಕಾರ್ಡ್ ಜೋಡಣೆ, ಕೇವಲ ದಾಖಲಾತಿಗೆ ಮಾತ್ರ – ಕೆ.ಜೆ. ಜಾರ್ಜ್, ಸ್ಪಷ್ಟನೆ.
- ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ; ಸಾವಿರದ 8 ನೂರಾ 14 ಕೋಟಿ 31 ಲಕ್ಷ ರೂಪಾಯಿ ಪರಿಹಾರ ಪಾವತಿ – ಚಲುವರಾಯಸ್ವಾಮಿ, ಮಾಹಿತಿ.
- ವಿಶ್ವ ಆರೋಗ್ಯ ಸಂಸ್ಥೆ ಒಡಂಬಡಿಕೆ; ಗರ್ಭ ನಿರೋಧಕ ಅಳವಡಿಕೆ ಯೋಜನೆ, ನಾಲ್ಕು ಜಿಲ್ಲೆಗಳಲ್ಲಿ ಯಶಸ್ವಿ – ದಿನೇಶ್ ಗುಂಡೂರಾವ್, ಹೇಳಿಕೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ

**ADDITIONAL NEWS PIECES -**

ಪ್ರದೇಶ ಸಮಾಚಾರ
12.07.2024
ಡೆಂಘಿ/ಮೀನು

ಒಳನಾಡು ಮೀನುಗಾರಿಕೆ ಮತ್ತು ಬಂದರು ಇಲಾಖೆ ಜಾಗೆಗಳಲ್ಲಿ, ಒಣ ಮೀನು ಸಿದ್ಧ ಪಡಿಸುವ, ಸಿಮೆಂಟ್ ತೊಟ್ಟಿಗಳಿಗೆ ಮುಚ್ಚಳ ಅಥವಾ ತಾಡಪಲ್ ಅಳವಡಿಸುವಂತೆ, ಉಡುಪಿ ಜಿಲ್ಲೆ ಮಲೇರಿಯಾ ನಿಯಂತ್ರಣಾಧಿಕಾರಿ ಡಾಕ್ಟರ್ ಪ್ರಶಾಂತ್ ಭಟ್, ಮಹಿಳಾ ಮೀನುಗಾರರಿಗೆ ಮನವಿ ಮಾಡಿದ್ದಾರೆ.

ಉಡುಪಿ ಬಳಿಯ ಮಲ್ಪೆ ಮೀನುಗಾರಿಕಾ ಬಂದರಿನ, ಮೀನುಗಾರರ ಸಹಕಾರ ಸಂಘದ ಸಭಾಂಗಣದಲ್ಲಿ ಕೀಟ ಜನ್ಯ ರೋಗಗಳ ನಿಯಂತ್ರಣಕ್ಕೆ, ಮುಂಜಾಗ್ರತಾ ಕ್ರಮಗಳ ಕುರಿತ, ಜನ ಜಾಗ್ರತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೋಣಿಗಳಿಗೆ ಅಳವಟ್ಟ ಟಾಯರ್‌ಗಳಲ್ಲಿ ನೀರು ನಿಂತು, ಸೊಳ್ಳೆಗಳು ಉತ್ಪತ್ತಿ ಆಗುತ್ತವೆ. ಟಾಯರ್ ಬದಲಿಗೆ ಹಗ್ಗ ಅಳವಡಿಸುವುದು ಸೂಕ್ತ. ಬೋಟ್‌ಗಳಲ್ಲಿ ಉಪಯೋಗಿಸುವ ಬ್ಯಾರೆಲ್‌ಗಳನ್ನು ಮಗುಚಿ ಹಾಕಬೇಕು. ಬಂದರಿನ ಸುತ್ತಮುತ್ತ ನೀರು ನಿಲ್ಲದಂತೆ, ಸ್ವಚ್ಛತೆ ಕಾಪಾಡಲು ಕೋರಿದರು.

ಮೀನುಗಾರರ ಸಹಕಾರ ಸಂಘದ ಅಧ್ಯಕ್ಷ ದಯಾನಂದ ಸುವರ್ಣ, ಪೌರಾಯುಕ್ತ ರಾಯಪ್ಪ ಪಾಲ್ಗೊಂಡಿದ್ದರು.

ಹರ್ಷ/ಉಮೇಶ/ಟಿಟಿಸಿ ಉಡುಪಿ

ಪ್ರದೇಶ ಸಮಾಚಾರ
12.07.2024
ಅಮರ್ಜಾ/ಉದ್ಘಾಟನೆ

ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆ ಅಡಿ, ಆಳಂದ ಪಟ್ಟಣಕ್ಕೆ ಅಮರ್ಜಾ ಅಣೆಕಟ್ಟೆಯಿಂದ ನೀರು ಸರಬರಾಜು ಮಾಡಲು, ಮೇಲ್ದರ್ಜೆಗೇರಿಸಿದ ಯೋಜನೆಯ ಕಾಮಗಾರಿಗೆ, ಶಂಕು ಸ್ಥಾಪನೆ ನಾಳೆ ಕಲಬುರಗಿಯಲ್ಲಿ ನೆರವೇರಲಿದೆ.

ವೀರಶೈವ ಲಿಂಗಾಯತ ಭವನದಲ್ಲಿ ಬೆಳಗ್ಗೆ 10 ಗಂಟೆಗೆ ಆಯೋಜಿತ ಕಾರ್ಯಕ್ರಮದಲ್ಲಿ, ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಭೈರತಿ ಸುರೇಶ ಅವರು, ಸಮಾರಂಭವನ್ನು ಉದ್ಘಾಟಿಸಲಿದ್ದಾರೆ.

ಹರ್ಷ/ಉಮೇಶ/ಕೆ.ವಾ.ಇ.ಕ.ಪ್ರ.

ಪ್ರದೇಶ ಸಮಾಚಾರ
**12.07.2024**
ಸಾಹಿತ್ಯ/ಸಮ್ಮೇಳನ

ಮಂಡ್ಯದಲ್ಲಿ ಡಿಸೆಂಬರ್ ತಿಂಗಳಲ್ಲಿ ಜರುಗಲಿರುವ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿಯಾಗಿ, ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ, ಸಮ್ಮೇಳನ ನಡೆಸಲು ಉದ್ದೇಶಿಸಿರುವ ಜಾಗೆಯನ್ನು ಪರಿಶೀಲಿಸಿದರು.

ಮಂಡ್ಯ ನಗರದ ಹೊರವಲಯದ ಸ್ಯಾಂಜೀ ಆಸ್ಪತ್ರೆ ಹಿಂಭಾಗದ ಸ್ಥಳವನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದ ಅವರು, ಸಮ್ಮೇಳನಕ್ಕೆ ಬರುವವರಿಗೆ ಎಲ್ಲ ರೀತಿಯ ಸೌಲಭ್ಯ ಒದಗಿಸಲು, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಹರ್ಷ/ಉಮೇಶ/ಪಿಟಿಸಿ ಮಂಡ್ಯ

ಪ್ರದೇಶ ಸಮಾಚಾರ
**12.07.2024**
ಐತಿಹಾಸಿಕ ಸ್ಮಾರಕ

ಶಿವಮೊಗ್ಗ ಜಿಲ್ಲೆ ಸೊರಬ ತಾಲೂಕಿನ, ಮಾವಳಿ ಗ್ರಾಮದ ಐತಿಹಾಸಿಕ ಸ್ಮಾರಕ, ಶಿಲಾ ಶಾಸನ ಮತ್ತು ವೀರಗಲ್ಲುಗಳ ರಕ್ಷಣೆಗೆ, ಕ್ರಮ ಕೈಗೊಳ್ಳುವಂತೆ, ಮುಖ್ಯಮಂತ್ರಿಗಳ ಕಚೇರಿಯ, ಸಾರ್ವಜನಿಕ ಕುಂದುಕೊರತೆ ವಿಭಾಗದ, ವಿಶೇ ' ಕರ್ತವ್ಯಾಧಿಕಾರಿಗಳಿಗೆ, ಎಕ್ಸ್ ಜಾಲತಾಣದ ಮೂಲಕ ಸ್ಥಳೀಯರೋರ್ವರು ಮನವಿ ಮಾಡಿದ್ದಾರೆ.

ತಕ್ಷಣವೇ ಸ್ಪಂದಿಸಿರುವ ಅಧಿಕಾರಿಗಳು, ಶಿವಮೊಗ್ಗ ವಸ್ತು ಸಂಗ್ರಹಾಲಯದ ಅಧಿಕಾರಿಗಳಿಗೆ ಮಾಹಿತಿ ನೀಡಿ, ಅವಸಾನದ ಅಂಚಿನಲ್ಲಿರುವ ಸ್ಮಾರಕಗಳನ್ನು ಸಂರಕ್ಷಿಸುವಂತೆ ಸೂಚಿಸಿದ್ದಾರೆ.

ಶಿವಮೊಗ್ಗ ವಸ್ತು ಸಂಗ್ರಹಾಲಯದ ಸಹಾಯಕ ನಿರ್ದೇಶಕರು, ಸ್ಥಳ ಪರಿಶೀಲನೆ ಕೈಗೊಂಡು, ಐತಿಹಾಸಿಕ ಸ್ಮಾರಕಗಳು ಹಾಗೂ ವೀರಗಲ್ಲುಗಳ ರಕ್ಷಣೆಗೆ ವಿಶೇ ' ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಹರ್ಷ/ಉಮೇಶ/ಮು.ಮಂ. ಎಕ್ಸ್ ಜಾಲತಾಣ ಖಾತೆ/ಓ.ಎಸ್.ಡಿ. ಎಕ್ಸ್ ಖಾತೆ